## ಕಳೆದ ಸಂಚಿಕೆಯಲ್ಲಿ



ಪಾಲ್‌ನಿಂದ ಮಗುವೊಂದನ್ನು ಪಡೆಯಬೇಕೆನ್ನುವ ನೀನಾಳ ಆಸೆ ಫಲಿಸಲಿಲ್ಲ. ಐವಿಎಫ್‌ನಿಂದ ನೋವು ಅನುಭವಿಸಬೇಕಾಯಿತು ಹಾಗೂ ದುಡ್ಡು ಕಳೆದುಕೊಳ್ಳುವಂತಾಯಿತು ಅಷ್ಟೇ. ಈ ಕೊರಗಿನ ಜೊತೆಗೆ ನೀನಾಳ ವರ್ತನೆ ದಿನದಿಂದ ದಿನಕ್ಕೆ ಬದಲಾಗತೊಡಗಿತು. ದಾಂಪತ್ಯದ ಮಾಧುರ್ಯ ದೀರ್ಘ ಕಾಲ ಉಳಿಯಲಿಲ್ಲ. ಹಾಗೆಂದು ನೀನಾಳ ಪ್ರೇಮದ ಉತ್ಕಟತೆಯ ಬಗ್ಗೆ ಪಾಲ್‌ಗೆ ಅನುಮಾನವಿರಲಿಲ್ಲ. ತನ್ನ ಗಂಡ ಓರ್ವ ಶಿಕ್ಷಕ ಎನ್ನುವುದು ಹಾಗೂ ಅವನ ವಯಸ್ಸು ತನಗಿಂತಲೂ ಹೆಚ್ಚಾಗಿರುವುದು ನೀನಾಳನ್ನು ಬಾಧಿಸತೊಡಗಿತ್ತು. ಹೆಂಡತಿ ತನ್ನನ್ನು ಯಾರಿಗಾದರೂ ಪರಿಚಯಿಸುವಾಗ ಉದ್ಯೋಗ ಮತ್ತು ವಯಸ್ಸಿನ ಬಗ್ಗೆ ಸುಳ್ಳು ಹೇಳಿದಾಗಲೆಲ್ಲ ಪಾಲ್‌ಗೆ ಕಿರಿಕಿರಿಯಾಗುತ್ತಿತ್ತು. ಆದರೆ, ನೀನಾಳ ಪ್ರೇಮದಲ್ಲಿ ಅವನು ಅಸಹಾಯಕನಾಗಿದ್ದ. ತಾನು ಬಂದು ಉಳಿದುಕೊಂಡಿರುವ ತನ್ನ ಪತ್ನಿಯ ಮನೆ ಒಂದು 'ಮುರಿದ ಮನೆ' ಎಂದು ತಿಳಿಯಲು ಅವನಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ನೀನಾ ತನ್ನ ಪುತ್ರಿಯರಿಂದಲೇ ತೊಂದರೆ ಎದುರಿಸಬೇಕಾಗುತ್ತಿತ್ತು. ಹೀಗೆ ಕಾಲ ಸರಿಯುತ್ತಿರುವಾಗ್ಗೆ, ಒಂದು ದಿನ ಮದುವೆ ಮುರಿದುಕೊಳ್ಳುವ ಮಾತನ್ನೂ ನೀನಾ ಆಡಿದಳು.

ದುಃಖವಾಯಿತು. ಅವಳ ಆ ಮಾತಿನಿಂದ, 'ಆ ಮನೆ ನೀನಾ ಮತ್ತು ಅವಳ ಮಕ್ಕಳಿಗೆ ಸೇರಿದ್ದು, ನಾನಲ್ಲಿ ಪರಕೀಯ, ನೀವು ನಮ್ಮನ್ನು ಸ್ವೀಕರಿಸುವುದಿಲ್ಲ, ನಾವು ನಿಮ್ಮನ್ನು ಸ್ವೀಕರಿಸುತ್ತೇವೋ ಇಲ್ಲವೋ ಎಂಬುದರ ಮೇಲೆ ಎಲ್ಲಾ ನಿಂತಿದೆ' ಎಂಬ ಭಾವನೆ ಸ್ಪಷ್ಟವಾಗಿ ತಿಳಿದುಬರುತ್ತಿತ್ತು. ರಾಮಚಂದ್ರರ ಪ್ರಶ್ನೆ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸಿತು. ಅವರಿಗೆ ನೀನಾಳ ಮನೆಯ ಸಂಪೂರ್ಣ ಪರಿಸ್ಥಿತಿಯ ಅರಿವಿತ್ತು, ಅದಕ್ಕೇ ಅವರು ನನ್ನಲ್ಲಿ ಇಂಥ ಪ್ರಶ್ನೆಗಳನ್ನು ಮಾಡಿದ್ದರು.

'ಪಾಲ್, ಅವಳ ಕಂಪ್ಯೂಟರ್‌ನಿಂದ ಪೇರೆಂಟಲ್ ಕಂಟ್ರೋಲ್ ತೆಗೆದು ಹಾಕಿ' – ನೀನಾ ನನ್ನನ್ನು ಒತ್ತಾಯಿಸಿದಳು. ಅವಳು ತನ್ನ ಮಗಳಿಗೆ ತಿಳಿವಳಿಕೆ ಹೇಳುವುದಕ್ಕೆ ಬದಲಾಗಿ ನನಗೇ ಪದೇ ಪದೇ ತಿಳಿ ಹೇಳುತ್ತಿದ್ದಳು. ಕಡೆಗೆ ನಾನೇ ಸೋತು ಅವಳ ಕಂಪ್ಯೂಟರಿನಿಂದ ಪೇರೆಂಟಲ್ ಕಂಟ್ರೋಲ್ ತೆಗೆದು ಹಾಕಬೇಕಾಯಿತು.

ನಾನು ಶಾಲಾ ಅಧ್ಯಾಪಕನಾಗಿದ್ದೆ, ಹೀಗಾಗಿ ಮಕ್ಕಳ ಸ್ವಭಾವ, ಗುಣ, ಅವರ ಆಚರಣೆಯ ಬಗ್ಗೆ ನನಗೆ ಚೆನ್ನಾಗಿ ಅರಿವಾಗುತ್ತಿತ್ತು. ನಾನು ನನ್ನ ಜೀವನದ ಹೆಚ್ಚು ಸಮಯವನ್ನು ಮಕ್ಕಳೊಂದಿಗೆ ಕಳೆದಿದ್ದೆ. ಜೊಹಾನಾ ಸರಿಯಾದ ದಿಕ್ಕಿನಲ್ಲಿ ಹೋಗುತ್ತಿಲ್ಲ ಎಂಬ ಅರಿವು ನನಗಾಗಿತ್ತು. ಒಂದು ವೇಳೆ ಈಗಲೇ ಅವಳನ್ನು ತಡೆಯದಿದ್ದರೆ, ಮುಂದೆ ತುಂಬಾ ತಡವಾಗುತ್ತದೆ. ಆದರೆ ಮನೆಯಲ್ಲಿ ನನ್ನ ಪರಿಸ್ಥಿತಿ ತುಂಬಾ ನಾಜೂಕಾಗಿತ್ತು. ನಾನು ಮಲತಂದೆಯಾಗಿದ್ದೆ. ನನಗೆ ಕಾನೂನಿನ ಯಾವುದೇ ಅಧಿಕಾರವಿರಲಿಲ್ಲ. ಈ ಹುಡುಗಿಯರು ಸಹ ನನ್ನನ್ನು ಅರ್ಥ ಮಾಡಿಕೊಳ್ಳುತ್ತಿರಲಿಲ್ಲ. ಅಲ್ಲದೆ ಅವರ ಸ್ವಂತ ತಂದೆ ಸಹ ಆಗಾಗ ಮಧ್ಯ ಪ್ರವೇಶಿಸಿ, ತನ್ನ ಪುತ್ರಿಯರ ಜೀವನದಲ್ಲಿ ತಾನಿದ್ದೇನೆಂದು ನೆನಪಿಸುತ್ತಿದ್ದ. ಈ ದೃಷ್ಟಿಯಿಂದಲೂ ನಾನು ಅಸಹಾಯಕನಾಗಿದ್ದೆ. ಆದರೂ ನಾನು ಎದುರಿಗೆ ಕಂಡ ನೊಣವನ್ನು ನುಂಗಲು ಸಾಧ್ಯವಿರಲಿಲ್ಲ.

ಜೊಹಾನಾ ಕುಡಿಯುತ್ತಾಳೆಂಬ ಅನುಮಾನ ನನಗೆ ಈ ಮೊದಲೇ ಇತ್ತು. ಅವಳ ತಾಯಿಯ ಸಿಗರೇಟ್ ಡಬ್ಬಿಯಿಂದ ಸಿಗರೇಟ್ ಕದಿಯುವುದನ್ನು ಎರಡು ಮೂರು ಬಾರಿ ನೋಡಿದ್ದೆ. ಅದೊಂದು ದಿನ ಅವಳು ಸಿಗರೇಟ್ ಸೇದುವುದನ್ನು ಕಣ್ಣಾರೆ ನೋಡಿದಾಗ, ನನ್ನಿಂದ ತಡೆದುಕೊಳ್ಳಲಾಗಲಿಲ್ಲ. ಅವಳ ಬಾಯಿಯಿಂದ ಸಿಗರೇಟ್ ಹೊರತೆಗೆದು, ಜೋರು ದನಿಯಲ್ಲಿ ಗದರಿದೆ, 'ಎಚ್ಚರ! ಇನ್ನೊಮ್ಮೆ ಸೇದಿದರೆ...!'

ಜೊಹಾನಾ ತಿರುಗಿ ಬಿದ್ದಳು, 'ನೀವೇಕೆ ನನ್ನನ್ನು ಗದರಿಸುತ್ತೀರಿ? ನೀವೇನು ನನ್ನ ಫಾದರ್ ಅಲ್ಲ... ಥತ್' ಎಂದು ಅಲ್ಲಿಂದ ಹೊರಟುಹೋದಳು.

ನನಗೆ ಆಶ್ಚರ್ಯವಾಯಿತು. 'ಥತ್' ಎಂದು ಇಷ್ಟು ಕೊಳಕಾಗಿ ನಿಂದಿಸುವುದೇ? ಇಷ್ಟು ಅಶಿಷ್ಟ ವರ್ತನೆ! ನಾನು ಈ ಹುಡುಗಿಯರನ್ನು ಸಾಕಿದ್ದೇನೆ, ಇವರ ನಿಜವಾದ ತಂದೆ ಇವರ ಹುಟ್ಟಿದ ಹಬ್ಬದಂದು ಸಹ ಬರುವುದಿಲ್ಲ. ನನಗೆ ಚೆನ್ನಾಗಿ ನೆನಪಿದೆ. 2008ರ ಬೇಸಿಗೆ ದಿನಗಳಲ್ಲಿ ನಾವು ನಾಲ್ವರು – ನೀನಾ, ಕರೀನಾ, ಜೊಹಾನಾ ಮತ್ತು ನಾನು ಅಮೆರಿಕ ಟೂರ್‌ಗೆ ಹೋಗಿದ್ದೆವು. ಆಗ ಜೊಹಾನಾಗೆ ಹದಿಮೂರು ವರ್ಷವಿರಬೇಕು. ಅಂದು ರಾತ್ರಿ ನಾವು ಬೋಸ್ಟನ್‌ನಲ್ಲಿದ್ದಾಗ ಜೊಹಾನಾಗೆ ಅಪೆಂಡಿಕ್ಸ್ ನೋವು ಕಾಣಿಸಿಕೊಂಡಿತು. ಅವಳು ರಾತ್ರಿಯಿಡೀ ವಾಂತಿ ಮಾಡಿಕೊಳ್ಳುತ್ತಿದ್ದಳು, ಹೊಟ್ಟೆನೋವಿನಿಂದ ನರಳುತ್ತಿದ್ದಳು. ಅವಳನ್ನು ಬೋಸ್ಟನ್ ಚಿಲ್ಡ್ರನ್ ಹಾಸ್ಪಿಟಲ್‌ಗೆ ದಾಖಲಿಸಬೇಕಾಯಿತು. ಆಪರೇಷನ್ ಆದ ನಂತರ ನಾನು ನೀನಾ ಮತ್ತು ಕರೀನಾಳನ್ನು ಮನೆಗೆ ನಿದ್ರಿಸಲು ಕಳುಹಿಸಿದೆ. ನಾನು ರಾತ್ರಿಯಿಡೀ ಜೊಹಾನಾಳ ಪಕ್ಕದಲ್ಲಿ ಕೂತು ಅವಳನ್ನು ನೋಡಿಕೊಳ್ಳುತ್ತಿದ್ದೆ. ಮರುದಿನ ಬೆಳಿಗ್ಗೆ ನರ್ಸ್ ನನ್ನನ್ನು ಪ್ರಶಂಸಿಸುತ್ತಾ ಹೇಳಿದ್ದಳು, 'ವಾಟ್ ಎ ಡೆಡಿಕೇಟೆಡ್ ಡ್ಯಾಡ್!'

ನಾವು ಓಲಿವರ್‌ಗೆ ಅವಳ ಆಪರೇಷನ್ ವಿಷಯ ತಿಳಿಸಿದ್ದೆವು. ಆದರೆ ಅವನಿಂದ 'ನಾನು ಬರಲಾರೆ' ಎಂಬ ಒಣ ಇಮೇಲ್ ಬಂದಿತ್ತು. ಅಂದು ಜೊಹಾನಾಳೊಂದಿಗೆ ತರ್ಕ ನಡೆದ ನಂತರ ನನಗೆ ಓಲಿವರ್‌ನ ಫೋನ್ ಬಂತು. ಅವನು ನನಗೆ, 'ನೀವು ಕರೀನಾ ಮತ್ತು ಜೊಹಾನಾರಿಗೆ ತೊಂದರೆಯನ್ನು ಕೊಡಬೇಡಿ' ಎಂದು ತಿಳಿಸಿದ್ದ.

ನಾನು ಮತ್ತಷ್ಟು ಕಕ್ಕಾಬಿಕ್ಕಿಯಾದೆ. ಓಲಿವರ್‌ಗೆ ಎಲ್ಲಾ ಹೇಗೆ ತಿಳಿಯಿತು? ಜೊಹಾನಾಳೇ ತನ್ನ ತಂದೆಗೆ ನನ್ನ ಬಗ್ಗೆ ಚಾಡಿ ಹೇಳಿರಬೇಕು.

'ನೋಡಿ, ನಾನೇನು ಬೇರೆಯಲ್ಲ. ನಾನು ಅವರ ತಾಯಿಯ ಪತಿ. ಈ ಮನೆಯಲ್ಲಿ ನನಗೂ ಜವಾಬ್ದಾರಿಯಿದೆ. ಅವರಿಗೆ ಸರಿಯಾದ ಶಿಕ್ಷಣವನ್ನು ಕೊಡುವುದು ನನ್ನ ಹೊಣೆಗಾರಿಕೆಯಾಗಿದೆ. ಅವರನ್ನು ತಪ್ಪು ಮಾರ್ಗದಿಂದ ತಡೆಯಬೇಕಾಗುತ್ತದೆ' ನಾನು ಓಲಿವರ್‌ಗೆ ಫೋನಿನಲ್ಲಿ ಹೇಳಿದೆ.

'ನಿಮ್ಮ ಭಾವನೆಗಳು ಪ್ರಾಮಾಣಿಕವಾಗಿವೆ. ಆದರೆ ನಿಮಗೆ ಮಕ್ಕಳ ಸಮಸ್ಯೆಗಳನ್ನು ಹೇಗೆ ನಿರ್ವಹಿಸಬೇಕೆಂಬುದು ತಿಳಿದಿಲ್ಲ. ನಿಮಗೆ ಅವರೊಂದಿಗೆ ಸೂಕ್ತವಾಗಿ ವರ್ತಿಸಲು ಬರುವುದಿಲ್ಲ'.

'ಹಾಗಾದರೆ ನೀವು ಅದನ್ನು ಕಲಿಸುತ್ತೀರಾ?' ನಾನು ತೀಕ್ಷ್ಣವಾಗಿ ಪ್ರಶ್ನಿಸಿದೆ.

'ನನಗನ್ನಿಸಿದಂತೆ, ನೀವೆಂದೂ ನಿಮ್ಮ ಮಕ್ಕಳೊಂದಿಗೆ ಇರಲಿಲ್ಲ. ಮಕ್ಕಳೊಂದಿಗೆ ಎರಡು ಮೂರು ವಾರ ಒಂದು ಸುಂದರ ರೆಸಾರ್ಟ್‌ನಲ್ಲಿ ರಜೆಗಳನ್ನು ಕಳೆಯುವುದು ಬೇರೆ ವಿಷಯ, ಅವರನ್ನು ಸಾಕುವುದು ಬೇರೆ ವಿಷಯ. ಮಕ್ಕಳನ್ನು ಹೇಗೆ ಸಾಕಬೇಕು, ಯೌವನಕ್ಕೆ ಕಾಲಿಡುತ್ತಿರುವ ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು ಎಂಬುದು ನಿಮಗೆ ಗೊತ್ತಿಲ್ಲ'.

'ಇದನ್ನೆಲ್ಲಾ ಕಡೇ ಪಕ್ಷ ನಿಮ್ಮಿಂದ ಕಲಿಯಬೇಕಾದ ಅವಶ್ಯಕತೆಯಿಲ್ಲ' ಎಂದು ಫೋನ್ ಕಟ್ ಮಾಡಿದೆ. ನನಗೆ ಅತೀವ ಸಿಟ್ಟು ಬಂದಿತ್ತು.

'ಒಂದು ವೇಳೆ ನಾನು, ನಿಮ್ಮಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಬಂದರೆ, ನಾನು ಜೊಹಾನಾಳನ್ನೇ ಆಯ್ಕೆ ಮಾಡಿಕೊಳ್ಳೀನಿ. ನನಗೆ ನನ್ನ ಮಕ್ಕಳೇ ಮೊದಲು...' ಎಂದು ನೀನಾ ಅನೇಕ ಬಾರಿ ನನಗೆ ಹೇಳಿದ್ದಳು. ನಿಮಗೆ ನನ್ನ ಮಗಳ ಬಗ್ಗೆ ಸಂವೇದನೆ ಇಲ್ಲ, ಸದಾ ಅವಳನ್ನು ತಡೆಯುವಿರಿ, ಗದರಿಸುವಿರಿ, ಅವಳನ್ನು ಪ್ರೀತಿಸುವುದಿಲ್ಲ, ಒಬ್ಬ ತಂದೆಯಂತೆ ಅವಳೊಂದಿಗೆ ವರ್ತಿಸುವುದಿಲ್ಲ ಎಂದು ನನ್ನ ಮೇಲೆ ಆಪಾದನೆಯನ್ನು ಸಹ ಹೊರಿಸಿದಳು.

'ಸಿಗರೇಟ್ ಸೇದದವರೇ ತಮ್ಮ ಮಕ್ಕಳಿಗೆ ಸಿಗರೇಟ್ ಸೇದಬಾರದೆಂದು ಹೇಳುತ್ತಾರೆ. ಸಿಗರೇಟು ಸೇದುವವರು ತಮ್ಮ ಮಕ್ಕಳಿಗೆ ಏನು